* * *

ಅವತ್ತು ಬುಧವಾರ.

ಅಪ್ಪ ಅಲಬ್ಬಕ್ಕ ತಂದಿದ್ದ ಕೆಂಪು ಹೂವಿನ ಚಿತ್ರ ಇದ್ದ ಹಸರ ಮಿಡಿ ಹಾಕ್ಯಂಡು ಸಾಲಿಗೊಂಟಿದ್ದೆ. ಅಪ್ಪ ಅವತ್ತು ಬೇಗ ಎದ್ದಿದ್ದ ನನ್ನ ನೋಡಿದವನೇ ಗಲ್ಲ ಹಿಡದು, 'ಯವ್ವ ಯಂಕಮ್ಮಾ ಚೆಂದ ಓದಬೋಕು ನೋಡ್ ನೀ ಸಾಲ್ಯಾಗ. ಊರಾರ್ ನಿಮ್ಮಪ್ಪನ್ನ ಎಷ್ಟ್ ಬೈದ್ರು ತಲಿಗಚಿಗ್ಯಬಾರ್ದು, ಸಾಲ್ಯಾಗ ಓದಿನ್ಯಾಗ ಮುಂದಿದ್ದು ಕನಕಪ್ಪನ ಮಕ್ಳು ಎಷ್ಟು ಕಷ್ಟ ಇದ್ರೂ, ಅದೆಷ್ಟು ಬಡತನ ಇದ್ರೂ ಚೆಂದ ಓದಿ ನಾಕು ಮಂದ್ಯಾಗ ಹೆಸರು ಮಾಡಿದ್ರು ನೋಡು ಅನ್ನಂಗಾಗಬೊಕು ನೀನು. ನಿಮ್ಮವ್ವ ಗಟ್ಟಿಗಿತ್ತಿ ಅದಾಳ. ಗಣಮಗ ದುಡದಂಗ ದುಡಿತ್ಯಾಳ. ಆಕಿಗೆ ಕೈಬಾಯಾಗ ಮಾತ ಕೇಳಿಕ್ಯಂತ ಇರಬೊಕು ನೋಡು' ಅಂದ ಅಪ್ಪ, ತಲೆಸವರಿ ಮೇಲಿಂದ ಕೆಳಗೊಮ್ಮೆ ನನ್ನ ದಿಟ್ಟಿಸಿ ಕಣ್ಣು ತುಂಬಿಕೊಂಡು ಸಣ್ಣ ನಗು ಬೀರಿದ. ಸಾಲಿಗೆ ಹೊತ್ತಾಗೈತಿ ಅನ್ನೋ ಅವಸರದಾಗಿದ್ದ ನಾನು ಅಪ್ಪ ಹೇಳಿದ್ದಕ್ಕೆಲ್ಲಾ ತಲೆ ಆಡಿಸಿದೆ. ಅಷ್ಟೊತ್ತಿಗೆ ಪಾತಿ, ಶಾಂತಿ ಬಂದಿದ್ರು. ಮೂವರು ಸೇರಿ ಸಾಲಿ ಕಡೆಗೆ ನಡದ್ವಿ.

ಮಧ್ಯಾಹ್ನದ ಊಟಕ್ಕ ಬಿಟ್ಟತ್ತು ಸಾಲಿಯೊಳಗೆಲ್ಲ ಗುಸುಗುಸು ಮಾತಾಡ್ತಿದ್ರು. ಪಾತಿ ಮತ್ತೆ ಶಾಂತಿ ಮುಖ ಸಪ್ಪಗ ಮಾಡಿಕ್ಯಂಡು 'ಲೇ ಯಂಕಿ ಸಾಲಿ ಮುಂದ ಪ್ಯಾರಲೆಣ್ಣು ಬಂದಾವ ತಿಂತ್ಯನು' ಅಂತ ಜೀವ ಮಾಡಿ ಕರಕೊಂಡು ಹೋದ್ರು. ಪ್ಯಾರಲೆಣ್ಣು ಮಾರ್ತಿದ್ದ ನಮ್ಮೂರು ಈರಮ್ಮಜ್ಜಿ ನನ್ನ ನೋಡಿದ್ದೆ 'ಅಲಲೇ ನೀ ನಮ್ಮ ಮ್ಯಾಗಡೆ ಓಣಿ ಕನಕಪ್ಪನ ಮಗಳಲ?' ಅಂತ ಕೇಳಿ ಹಣ್ಣು ಕೊಟ್ಟು ರೊಕ್ಕ ತಗೊಳ್ಳದೆ ಕಳಿಸಿದ್ಲು. ಅವತ್ತು ಅಪ್ಪನ ಹೆಸರು ಶಾಲೆಲಿ ಎಲ್ಲರ ಬಾಯಲ್ಲಿತ್ತು. ನನ್ನ ಕಂಡವರೆಲ್ಲ ಜೀವ ಮಾಡಿ, ಪಾಪ ಅಂದಾಗ ಒಂಥರಾ ಖುಷಿಯಲ್ಲಿದ್ದೆ. ಅವ್ವ ಅವತ್ತು ಸಾಲಿ ಅಡಗಿ ಕೆಲಸಕ್ಕೆ ಬಂದಿರಲಿಲ್ಲ. ಬಿಸಿಯೂಟ ಮುಗದದ್ದೆ ನಮ್ಮ ಹೆಡ್ ಮಾಸ್ತರು ನನ್ನ ಮನೆಗೆ ಹೋಗು ಅಂದಾಗ ಅರ್ಧ ರಜೆ ಸಿಕ್ತು ಅಂತ ಖುಷಿಯಾದೆ. ಪಾತಿ, ಶಾಂತಿನೂ ಜೊತೆಗೆ ಬಂದಿದ್ರು. ರೋಡಿನಲ್ಲಿ ಹೋಗುವಾಗ ಮಂದಿ ಬಾಯಿಗೆ ಬಟ್ಟು ಇಟ್ಕೊಂಡು 'ಇದಾ ಹುಡುಗ್ಯಂಗೆ ಕನಕಪ್ಪನ ಮಗಳು. ಬಂಗಾರದಂಗಿದ್ನವ್ವ ಕನಕಪ್ಪ, ಸಾಲ ಅಂಬಾದು ಕೆಟ್ಟಂಗೆ' ಅಂತ ದಿಟ್ಟಿಸಿ ನೋಡುತ್ತಿದ್ರು. ಮನೆ ಇರೊ ದಾರಿಯಲ್ಲಿ ಕಾಯ್ಗಡ್ಡಿ ಮಾರ್ತಿದ್ದ ರಡ್ಡೆಪ್ಪ, 'ರೊಕ್ಕಾ ನುಂಗಿದ್ನಲಲೇ ನಿಮ್ಮಪ್ಪ, ತೇರಿನ್ಯಾಗ ಕುಣಕಂತ ಬರ್ತಾನೀಗ ನೋಡ್ ಹೋಗ್' ಅಂದಾಗ ನಾನು ಪಾತಿ ಮತ್ತೆ ಶಾಂತಿ, ಸಾಲಿ ಚೀಲದ ಜೊತಿಗೆ ಓಡಿ ಮನೆ ಮುಟ್ಟಿದ್ವಿ. ನನ್ನ ನೋಡಿದ್ದೆ ದೊಡ್ಡವ್ವ 'ನಿಮ್ಮಪ್ಪನ್ನ್ ನೋಡಲೆ ಯಂಕಿ ಹೆಂಗ್ ಕುಂತಾನ, ಎದ್ದೇಳಸ ಬಾರ ನಮ್ಮವ್ವ, ನನ್ನ್ ಮಕ್ಕಳ್ನ ಹಂಗ್ ಓದಸ್ಬೊಕು, ಹಿಂಗ್ ದೊಡ್ಡಾರ್ನ ಮಾಡಬೋಕು, ಬ್ಯಾರೆ ಕಡಿಗೆ ಸಾಲಿಗ್ ಹಚ್ಚಬೊಕು ಅಂದಿದ್ನಲಂಗೆ, ಹೆಂಗ್ ಕುಂತಾನ ನೋಡಬೇ ಯವ್ವೊ... ನೀ ಹೋಗಿ ಯಪ್ಪಾ ಎದ್ದೇಳು ಅಂತ ಎದ್ದೇಳಸಂಗೆ' ಅಂತ ನನ್ನ ತಬ್ಬಿ ಅಳುತ್ತಿದ್ಲು...

ಅವ್ವನ ಕಣ್ಣಲ್ಲಿ ಒಂದು ಹನಿ ನೀರೂ ಬರಲಿಲ್ಲ, ಕಣ್ಣೆಲ್ಲಾ ಕೆಂಪಗಾಗಿ ಯಾರನ್ನೋ ಕಾಯುತ್ತಾ ಹಾದಿಯನ್ನು ದಿಟ್ಟಿಸುತ್ತಾ ಕುಳಿತಿದ್ದಳು. ಸ್ವಲ್ಪ ಹೊತ್ತಾದ ಮೇಲೆ ಅದೇ ಬಿಳಿ ಲುಂಗಿಗಳು ಹಾದಿಯ ದೂರದಲ್ಲಿ ಕಾಣತೊಡಗಿದವು, ಅವ್ವನ ಕಣ್ಣು ಇನ್ನಷ್ಟು ಕೆಂಪಗಾಗಿ ಕುಳಿತಲ್ಲಿಂದ ಎದ್ದವಳೇ ಆ ಬಿಳಿ ಲುಂಗಿಗಳ ಕಡೆಗೆ ಬಿರುಸಿನಿಂದ ಓಡಿ 'ನನ್ನ್ ಗಂಡನ್ನ ನುಂಗಿದ್ರಲ್ಲೊ ಸನೆಸಿಗಳ' ಅನ್ನುತ್ತಾ ಸೀದಾ ಕುತ್ತಿಗೆಗೆ ಕೈ ಹಾಕಿದವಳು ಹಸಿದ ಹುಲಿಯಂತಾದ ಅವಳ ಮುಖ, ಕೆದರಿದ ಕೂದಲು ನೋಡಿ ಸುತ್ತಲಿದ್ದವರಿಗೂ ಹೆದರಿಕೆಯಾಯಿತು. ಜನ ತಮ್ಮ ತಮ್ಮಲ್ಲೇ ಮಾತನಾಡತೊಡಗಿದರು, ಜಾರುತ್ತಿದ್ದ ತನ್ನ ಸೆರಗನ್ನ ಮತ್ತೆ ಸರಿಪಡಿಸಿಕೊಂಡು, ಸೆರಗನ್ನ ಗಟ್ಟಿಯಾಗಿ ಸೊಂಟಕ್ಕೆ ಸುತ್ತಿ, ತುರುಬನ್ನ ಗಟ್ಟಿಯಾಗಿ ಬಿಗಿಗೊಳಿಸಿದವಳೆ ಅವರ ಕುತ್ತಿಗೆಯನ್ನ ಮತ್ತಷ್ಟು ಬಿಗಿಯಾಗಿ ಹಿಡಿದು ಲುಂಗಿಯಿಂದ ಅವರ ಕುತ್ತಿಗೆಯನ್ನ ಬಿಗಿದು ತಿರುವಿದ್ದೇ ತಡ, ಬಿಳಿಯ ಲುಂಗಿಯೆಲ್ಲ ಕೆಂಪಾಯಿತು. ಅವ್ವ ರುಂಡ ಹಿಡಿದು ಎದುಸಿರು ಬಿಡುತ್ತಾ ಕಾಳಿಯಂತೆ ಭಯಂಕರವಾಗಿ ಕಾಣುತ್ತಿದ್ದಳು, ಸುತ್ತಲಿದ್ದವರೂ ತಮಗರಿವಿಲ್ಲದಂತೆ ಕೈ ಮುಗಿದು ನಿಂತಿದ್ದರು.

ಅಪ್ಪ ತೇರಿನ ಮೇಲೆ ದೇವರಾಗಿ ಕುಂತಿದ್ದ!

●